ಆಧಾರದ ಮೇಲೆ ತಮ್ಮ ಮುಂದಿನ ಜೀವನವನ್ನು ಕಟ್ಟಿಕೊಳ್ಳುತ್ತಾರೆ. ಇವರೆಲ್ಲ ಅಗತ್ಯವಿಲ್ಲದೆ ಇದ್ದರೂ ಮುಂದಿನ ಜೀವನದಲ್ಲಿ ಶೋಷಕರ ಸ್ಥಾನವನ್ನು ಅಲಂಕರಿಸುತ್ತಾರೆ. ಏಕೆಂದರೆ ಇವರಿಗೆ ದೊರೆತ ಶೋಷಣೆಯ ಅನುಭವ, ಶೋಷಣೆಯ ಮುಖಾಂತರವಷ್ಟೇ ಬದುಕಿನ ಶಾಶ್ವತ ಅರ್ಥವನ್ನು ಕಂಡುಕೊಳ್ಳಬೇಕೆಂಬ ಜೀವನದ ಪಾಠವನ್ನು ಅವರಿಗೆ ಕಲಿಸಿರುತ್ತದೆ.



ಬೆಂಗಳೂರಿನ ಬೀದಿಗಳಲ್ಲಿ ಸುಮಾರು ೫೦ ರಿಂದ ೬೦ ಸಾವಿರ ಮನೆಮಠ ಕಳೆದುಕೊಂಡ ಮಕ್ಕಳು ವಾಸಿಸುತ್ತಿದ್ದಾರೆ. ಇವರಿಗೆ ಆಶ್ರಯ ಒದಗಿಸುವ ಉದ್ದೇಶ ಇಟ್ಟುಕೊಂಡ, ನಮ್ಮ ಕರ್ನಾಟಕದ ಎಲ್ಲ ಸರ್ಕಾರಿ ಆಶ್ರಮ ಶಾಲೆಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ, ಕೇವಲ ಐದು ಸಾವಿರ ಅನಾಥ ಮಕ್ಕಳಿಗೆ ಮಾತ್ರ ಅವುಗಳಲ್ಲಿ ಜಾಗ ಕಲ್ಪಿಸಲು ಸಾಧ್ಯವಾಗಿದೆ. ನಮ್ಮ ಸರ್ಕಾರಿ ವ್ಯವಸ್ಥೆ ಬೀದಿ ಬದಿಯ ಮಕ್ಕಳ ಸಮಸ್ಯೆಯನ್ನು ಎಷ್ಟು ಹಗುರವಾಗಿ ಪರಿಗಣಿಸಿದೆ ಎಂಬುದನ್ನು ಈ ಅಂಕಿ ಅಂಶಗಳೇ ತಿಳಿಸುತ್ತವೆ. ಇಂತಹ ಗಂಭೀರ ಸಮಸ್ಯೆಗಳ ನಡುವೆ ಸರ್ಕಾರ, "ಅಭಿವೃದ್ಧಿ ಸಾಧಿಸುತ್ತೇವೆ" ಎನ್ನುತ್ತ ಅದ್ದೂರಿ ಫ್ಯಾಕ್ಟರಿಗಳನ್ನು ತೆರೆದು ಶ್ರೀಮಂತರ ಅನಾವಶ್ಯಕ ಅಗತ್ಯಗಳನ್ನು ಪೂರೈಸುವಲ್ಲಿ ಮಾತ್ರ ನಿರತವಾಗಿದೆ. ಉದಾಹರಣೆಗೆ ಅತ್ಯಾಧುನಿಕವಾದ ನೂಡಲ್ಸ್‌ಗಳನ್ನು ಮಾಡುವ ಫ್ಯಾಕ್ಟರಿಯನ್ನು ಮುನ್ನೂರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಂಜನಗೂಡಿನ ಸಮೀಪ ತೆರೆದು, ಕೇವಲ ತಾನು ಅಭಿವೃದ್ಧಿ ಸಾಧಿಸಿರುವುದಾಗಿ ಹೆಮ್ಮೆಯಿಂದ ಸರ್ಕಾರ ಬೀಗುತ್ತಿದೆ. ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ನಮ್ಮ ಗ್ರಾಮೀಣ ಪ್ರದೇಶದ ಶೇಕಡ ೮೦ ಭಾಗ ಜನ ಅರೆಹೊಟ್ಟೆಯಿಂದ ಬಳಲುತ್ತಿದ್ದಾರೆ. ನಮ್ಮ ಸರ್ಕಾರಕ್ಕೆ ಬಾಲಕಾರ್ಮಿಕರ ಸಮಸ್ಯೆಯಾಗಲಿ, ಹಸಿವಿನ ಸಮಸ್ಯೆಯಾಗಲಿ ಗಂಭೀರವಾಗಿ ಕಾಣುವುದೇ ಇಲ್ಲ. ಅಭಿವೃದ್ಧಿ ಎಂದರೆ ತಲಾವಾರು ಆರ್ಥಿಕ ಆದಾಯದ ಹೆಚ್ಚಳ ಎಂದೇ ಲೆಕ್ಕ ಹಾಕಿ ವಾಸ್ತವ ಸತ್ಯಗಳನ್ನು ನಮ್ಮ ಸರ್ಕಾರ ಮರೆಮಾಚುತ್ತಿದೆ.


### ಅನಾಗರಿಕ ಕಾಡುನಿಯಮ

ಮನುಷ್ಯ ಸಂಬಂಧಗಳ ಎಲ್ಲ ಸುಸಂಸ್ಕೃತ ಭಾವನೆಗಳನ್ನು ನಾವು ಬದಿಗಿಟ್ಟು, 'ಬಲಿಷ್ಠವಾದದ್ದು ಮಾತ್ರ ಗೆದ್ದು ನಿಲ್ಲಬೇಕು' ಎಂಬ ಅನಾಗರಿಕ ಪ್ರಾಣಿಪ್ರಪಂಚದ ಕಾಡು ನಿಯಮದ ಮೇಲೆ ನಮ್ಮ ಸಮಾಜವನ್ನು ಕಟ್ಟುತ್ತಿದ್ದೇವೆ. ನಮ್ಮಲ್ಲಿ ನೈಜ ಆಧ್ಯಾತ್ಮಿಕ ತತ್ವಗಳು ಆಚರಣೆಯಲ್ಲಿ ಬಂದಿವೆ ಎನ್ನುವುದಾದರೆ, ಎಲ್ಲ ಬಗೆಯ ಶೋಷಣೆಗಳು ಅಂತ್ಯಗೊಂಡಿರುವುದೇ ಅದಕ್ಕೆ ಇರಬೇಕಾದ ಕುರುಹು. ಸಂನ್ಯಾಸಿ ಮಠವಾಗಲಿ ಅಥವಾ ಸಂಸಾರಿಯ ಮನೆಯಾಗಲಿ, ಶೋಷಣೆಯ ಲವಲೇಶವೂ ಅವುಗಳಲ್ಲಿ ಇಲ್ಲ ಎನ್ನುವುದಾದರೆ ಮಾತ್ರ, ಆ ಸ್ಥಾನಗಳಲ್ಲಿ ಅಧ್ಯಾತ್ಮ ನೆಲೆಸಿದೆ ಎಂದು ಗುರುತಿಸಬಹುದು. ಏಕೆಂದರೆ ಭೌತಿಕ ಶೋಷಣೆಗಿಂತ ಮಾನಸಿಕ ಶೋಷಣೆ ಹೆಚ್ಚು ಹಾನಿಕರ.

ಸತ್ಯ ಅಹಿಂಸೆಗಳ ಆಧಾರದ ಮೇಲೆ ಅನುಷ್ಠಾನಗೊಂಡ ಅಧ್ಯಾತ್ಮ ಪ್ರಜ್ಞೆ ಒಬ್ಬ ವ್ಯಕ್ತಿಯನ್ನು ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತಗೊಳಿಸುತ್ತದೆ. ಇಂತಹ ವ್ಯಕ್ತಿಯನ್ನು ಇತರರು ಶೋಷಣೆಗೆ ಒಳಪಡಿಸಿದರೂ, ಶೋಷಣೆಗೆ ಒಳಗಾದ ಕ್ಲೇಶವಾಗಲಿ ಅಥವಾ ದುಗುಡ ದುಮ್ಮಾನವಾಗಲಿ ಅವನಿಗೆ ವ್ಯಕ್ತಿಗತವಾಗಿ ಉಂಟಾಗುವುದೇ ಇಲ್ಲ. ಇವನು ಸಹಜವಾಗಿ ನಕ್ಕು ಸುಮ್ಮನಾಗಿ ಬಿಡಬಲ್ಲ.

ಎಲ್ಲ ಬಗೆಯ ಶೋಷಣೆಯನ್ನು ನಾವು ಮುಗ್ಧರ ಮತ್ತು ಕಪಟಿಗಳ ನಡುವೆ ಇರುವ ಮೌಲ್ಯರಹಿತ ಸಂಬಂಧವಾಗಿ ಗುರುತಿಸಬಹುದು. ಮೌಲ್ಯರಹಿತ ವ್ಯಕ್ತಿಯ ಮೂಲ ಮನೋಧರ್ಮ 'ಸ್ವಾರ್ಥ' ವಲ್ಲದೆ ಬೇರೇನೂ ಆಗಿರಲು ಸಾಧ್ಯವಿಲ್ಲ. ಏಕೆಂದರೆ ಅವನಲ್ಲಿ ಮೌಲ್ಯಗಳೇ ಇರುವುದಿಲ್ಲ. ಹಾಗಾಗಿ ಅವನಲ್ಲಿ ಶೋಷಣೆ ಅನಿವಾರ್ಯವಾಗುತ್ತದೆ.

ಆದ್ದರಿಂದ, ನಿಜವಾದ ಶೋಷಣಾರಹಿತ ಸಮಾಜವನ್ನು ನಾವು ನಿರ್ಮಿಸಬೇಕೆಂದರೆ, ಕನ್ನಡದ ಆದಿಕವಿ ಪಂಪ ಹೇಳಿದ ಹಾಗೆ, **'ಮನುಷ್ಯ ಜಾತಿ ತಾನೊಂದೆ ವಲಂ'** ಎಂಬ ಏಕತೆಯ ತತ್ವವನ್ನು ಸರ್ವರೂ ಮನಗಾಣುವ ಪರಿಸರ ನಿರ್ಮಾಣವಾಗಬೇಕು. ಇಂತಹ ಪರಿಸರ ಕೇವಲ ಉಪದೇಶಗಳಿಂದ ಮಾತ್ರ ಸಾಧ್ಯವಿಲ್ಲ. ಅನುಷ್ಠಾನಪರರಾದ ಕೆಲವರಾದರೂ ಈ ಮೌಲ್ಯಗಳಿಗೆ ಜೀವಂತ ಉದಾಹರಣೆಯಾಗಿ ಸಮಾಜದಲ್ಲಿ ಅಲ್ಲಲ್ಲಿ ಕಾಣಿಸಿಕೊಂಡರೆ ಮಾತ್ರವೇ ಮನುಷ್ಯಕುಲಕ್ಕೆ ಉತ್ತಮ ಭವಿಷ್ಯದ ಸಾಧ್ಯತೆ ಇದೆ. ಮೌಲ್ಯಗಳು ಅನುಷ್ಠಾನಸಾಧ್ಯ ಎಂದು ತೋರಿಸುವ ಒಬ್ಬರೂ ಇಲ್ಲ ಎಂದಾದರೆ, ಆಗ ಇಡೀ ಮನುಕುಲಕ್ಕೆ ಭವಿಷ್ಯವೇ ಇಲ್ಲ ಎಂದು ನಾವು ಭಾವಿಸದೆ ಅನ್ಯಮಾರ್ಗವಿಲ್ಲ.



# ಆತ್ಮಜಾಗೃತಿಯಿಂದ ಶೋಷಣೆಯ ಭೂತೋಚ್ಚಾಟನೆ

**ಶೋಷಣೆಯ ವಿಶ್ಲೇಷಣೆ** — **ವಿಜಯಕುಮಾರ**

ಸ್ವಾಮಿ ವಿವೇಕಾನಂದರು ಅಮೇರಿಕದಲ್ಲಿ ಆಗ ತಾನೇ ಕಾಲೂರಿದ ಹೊಸತು; ತಂಗಲು ತಾವಿದ್ದ ಬಾಲ್ಟಿಮೋರ್ ಪ್ರಾಂತ್ಯದ ಹೊಟೆಲುಗಳ ಬಾಗಿಲು ತಟ್ಟುತ್ತಾ ಹೋದರು. ವರ್ಣದ್ವೇಷ ಇನ್ನೂ ಬುಸುಗುಟ್ಟುತ್ತಿದ್ದ ಆ ದಿನಗಳಲ್ಲಿ ಸ್ವಾಮೀಜಿಯವರ ನಸುಗಪ್ಪು ಬಣ್ಣವನ್ನು ಕಂಡೊಡನೆ ಎಲ್ಲ ಹೊಟೆಲ್‌ಗಳ ಬಾಗಿಲುಗಳೂ ಮುಚ್ಚಿಕೊಳ್ಳುತ್ತಿದ್ದವು. ಆ ಅಪರಿಚಿತ ನಾಡಿನಲ್ಲಿ ನಿರಾಶ್ರಿತರಾಗಿ ಅತ್ಯಂತ ಹತಾಶೆಯಿಂದ ಅಲೆಯುತ್ತಿದ್ದ ಇವರನ್ನು ಗಮನಿಸುತ್ತಿದ್ದ ಒಬ್ಬಾತ, "ಆ ಹೊಟೆಲ್‌ನವರಿಗೆ 'ನಾನು ನೀಗ್ರೋ ಅಲ್ಲ' ಎಂದು ನೀವೇಕೆ ತಿಳಿಸಲಿಲ್ಲ?" ಎಂದು ಕೇಳಿದ. ಆ ಮಾತಿನಿಂದ ಸ್ವಾಮೀಜಿಯವರಿಗೆ ಜುಗುಪ್ಸೆ ಉಂಟಾಯಿತು. "ಏನು? ಮತ್ತೊಬ್ಬನ ದೈನ್ಯ ಸ್ಥಿತಿಯ ಪ್ರಯೋಜನ ಪಡೆದು, ನನ್ನ ಮೇಲ್ಮೆಯನ್ನು ನಾನು ನಿರೂಪಿಸಿಕೊಳ್ಳುವುದೆ! ಮತ್ತೊಬ್ಬನನ್ನು ಬಳಸಿಕೊಂಡು ಮೇಲೆ ಬರಲು ನಾನು ಜನ್ಮವೆತ್ತಿಲ್ಲ!" ಎಂದು ಅವರು ಗುಡುಗಿದರು. ಎಂಥ ಅಸಹಾಯಕ ಪರಿಸ್ಥಿತಿಯಲ್ಲೂ, ತುಳಿತಕ್ಕೆ ಒಳಗಾದವರೊಂದಿಗೆ, ದೀನರೊಂದಿಗೆ ಗುರುತಿಸಿಕೊಳ್ಳುವ ಮನೋಭಾವ ಅವರದಾಗಿತ್ತು.

ವೇದಾಂತದ ಸಮದರ್ಶಿತ್ವದ ಭಾವದಲ್ಲಿ ಪ್ರತಿಷ್ಠಿತರಾಗಿದ್ದ ಸ್ವಾಮೀಜಿಯವರಿಗೆ ದಿನನಿತ್ಯದ ವ್ಯವಹಾರದಲ್ಲಿ 'ಸರ್ವ ಸಮಾನತೆ' ಎಂಬುದು ಬರಿಯ ಸೈದ್ಧಾಂತಿಕ ನಿಲುವಿಗಿಂತ ಹೆಚ್ಚಾಗಿ ಅನುಭೂತಿಯ ಒಂದು ದರ್ಶನವೇ ಆಗಿತ್ತು. **ಜನಾಂಗೀಯ ತಾರತಮ್ಯ, ದುರ್ಬಲರ ಶೋಷಣೆ, ದೀನಜನರ ಮೇಲೆ ದಬ್ಬಾಳಿಕೆ** – ಇವುಗಳನ್ನು ಕಂಡಾಗ ಸ್ವಾಮೀಜಿಯವರ ಧಮನಿಗಳಲ್ಲಿ ಹರಿಯುತ್ತಿದ್ದ ಕ್ಷಾತ್ರ ರಕ್ತ ಕುದಿಯುತ್ತಿತ್ತು; ಆ ಅಸಹಾಯಕ ಜನರ ರಕ್ಷಣೆಗಾಗಿ ತಮ್ಮ ಜೀವವನ್ನೂ ಲೆಕ್ಕಿಸದೆ ಕಾದಾಡುವ ಪೌರುಷ ಒಮ್ಮೆಲೇ ಅವರಲ್ಲಿ ಜಾಗ್ರತಗೊಳ್ಳುತ್ತಿತ್ತು.

## ಶೋಷಣೆ – ಏಕೆ? ಹೇಗೆ?

ಯಾವುದೇ ಶೋಷಣೆ ಅನ್ಯಾಯಗಳ ಸಂದರ್ಭದಲ್ಲಿ ಕಂಡುಬರುವ, ಶೋಷಿತರು–ಶೋಷಕರು, ಯಜಮಾನಿಕೆ ನಡೆಸುವವರು–ತಗ್ಗಿ ಬಗ್ಗಿ ನಡೆಯುವವರು, ಇತರರ ಬೆವರಿಳಿಸುವವರು–ಇತರರಿಗಾಗಿ ಬೆವರು ಸುರಿಸುವವರು, ಶ್ವೇತ ವರ್ಣೀಯರು – ಕರಿಯರು, ಅಧಿಕಾರದ ಚುಕ್ಕಾಣಿ ಹಿಡಿದುಕೊಂಡ ಮೇಲ್ವರ್ಗದವರು–ಕಾರ್ಮಿಕ ಕೆಳವರ್ಗದವರು – ಈ ವಿಭಜನೆಗಳಲ್ಲಿ ಯಜಮಾನಿಕೆ ನಡೆಸುವ ಮೇಲ್ವರ್ಗದವರ ನಿರೀಕ್ಷೆಗಳು ಕೆಲವೊಮ್ಮೆ ಅತ್ಯಂತ ಅತಿರೇಕವಾಗಿರುತ್ತವೆ. ಶ್ವೇತವರ್ಣೀಯರಿಗೆಂದೇ ಕಾದಿರಿಸಿರುವ ರೈಲ್ವೆ ಬೋಗಿಗಳಲ್ಲಿ ಕಪ್ಪು ಬಣ್ಣದವರಿಗೆ ಅವಕಾಶವಿಲ್ಲ; ಅಧಿಕಾರಿಗಳ ಮಕ್ಕಳು ಓದುವ ಶಾಲೆಯಲ್ಲಿ ಕಾರ್ಮಿಕರ ಮಕ್ಕಳಿಗೆ ಪ್ರವೇಶವಿಲ್ಲ ಮುಂತಾದ ತಾರತಮ್ಯಗಳನ್ನು ಪ್ರತಿಭಟಿಸಲು ಶೋಷಿತರು ಹೂಡುವ ಪರೋಕ್ಷ ಅಸ್ತ್ರಗಳಾದ ವ್ಯಂಗ್ಯಚಿತ್ರಗಳು, ವಿಡಂಬನೆಗಳು ಇವುಗಳನ್ನು ಅರ್ಥಮಾಡಿಕೊಳ್ಳಲೂ ಆಗದ, ಸಂವೇದನೆಯೇ ಜಡ್ಡುಗಟ್ಟಿದ ಒಂದು ಶೋಚನೀಯ ಪರಿಸ್ಥಿತಿಯಲ್ಲಿ ಮೇಲ್ವರ್ಗದವರಿರುತ್ತಾರೆ.

ಸೋಜಿಗವೆಂದರೆ ಮೇಲ್ವರ್ಗದವರ ಬಗ್ಗೆ ದಮನಿತರಿಗೆ (ತುಳಿಯಲ್ಪಟ್ಟವರಿಗೆ) ತಿಳಿದಿರುವಷ್ಟು ದಮನಿತರ ಬಗ್ಗೆ ಮೇಲ್ವರ್ಗದವರಿಗೆ ತಿಳಿದಿರುವುದಿಲ್ಲ. ದಮನಿತರನ್ನು ಹತ್ತಿಕ್ಕಲು ಮೇಲ್ವರ್ಗದವರು ನಡೆಸುವ ದಬ್ಬಾಳಿಕೆಯ ವಾತಾವರಣದ ತೆರೆಮರೆಯಲ್ಲಿ, ಮೇಲ್ವರ್ಗದವರ ವಿರುದ್ಧ ಗೇಲಿ ಹೀಯಾಳಿಕೆಗಳು ಸಾಗುತ್ತಲೇ ಇರುತ್ತವೆ. ಆದರೂ ಮೇಲ್ವರ್ಗದವರಿಗೆ ತಮ್ಮ ವಕ್ರತೆಯ ಬಗ್ಗೆ ಅರಿವಾಗುವುದಿಲ್ಲ; ಹೀಗಾಗಿ ಅವರು ತಮ್ಮ ತಪ್ಪನ್ನು ತಿದ್ದಿಕೊಳ್ಳುವುದಿಲ್ಲ. ಬದಲಾಗಿ ಇನ್ನೂ ಹೆಚ್ಚಿನ ಕ್ರೌರ್ಯದ ವಿಧಾನಗಳನ್ನು ಬಳಸಿ ದಮನಿತರ ಮೇಲೆ ಹೆಚ್ಚು ಹೆಚ್ಚು ದಬ್ಬಾಳಿಕೆಯನ್ನು ನಡೆಸುತ್ತಾರೆ. ಇದಲ್ಲದೆ

---

ಶೋಷಕರಿಗೆ ಶೋಷಿತರ ಮನದಾಳದ ನೋವು ಅರ್ಥವಾಗುವುದಿಲ್ಲ. ಹೀಗಾಗಿ ಅವರ ದಬ್ಬಾಳಿಕೆ ಅವ್ಯಾಹತವಾಗಿ ಮುಂದುವರಿಯುತ್ತಲೇ ಇರುತ್ತದೆ. ನಾಗರಿಕ ಸಮಾಜ ಶೋಷಣೆಯನ್ನು ಪ್ರತಿಭಟಿಸುವ ನೈತಿಕ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಕಡೆಯದಾಗಿ, ಆತ್ಮವಿಶ್ವಾಸ ಮೂಡಿಸುವ ವಾತಾವರಣ ಮಾತ್ರವೇ ಶೋಷಿತರಲ್ಲಿ ಆತ್ಮಜಾಗೃತಿಯನ್ನು ಉಂಟುಮಾಡಬಲ್ಲದು. ಇವುಗಳನ್ನು ಓಜಸ್ವೀ ಭಾಷೆಯಲ್ಲಿ ಪ್ರಖರವಾಗಿ ನಿರೂಪಿಸಿರುವ ಲೇಖಕರು ಮುಂಬೈ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ; ಅವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.

ದಮನಿತರನ್ನು ಯಾವಾಗಲೂ ಕೀಳು, ದೂಷಿತರು ಎಂದೇ ಉದ್ಧಟತನದಿಂದ ನಡೆಸಿಕೊಳ್ಳುವ ಆ ಶೋಷಕರು ತಮ್ಮ ಅಧಿಕಾರದ ಬಲದಿಂದ ನಿರಂತರವಾದ ಶೋಷಣೆಗೆ ಅನುಕೂಲವಾಗುವ ಒಂದು ಸುಸಜ್ಜಿತವಾದ ವ್ಯವಸ್ಥೆಯನ್ನು ರೂಪಿಸುವುದರಲ್ಲಿಯೇ ನಿರತರಾಗಿರುತ್ತಾರೆ. ಏಕೆಂದರೆ, ಅಧಿಕಾರದ ಜೊತೆಜೊತೆಯಲ್ಲಿಯೇ ಅದನ್ನು ಕಳೆದುಕೊಳ್ಳುವ ಭಯವೂ ಅವರ ಮನಸ್ಸಿನಲ್ಲಿ ಯಾವಾಗಲೂ ಮನೆ ಮಾಡಿಕೊಂಡಿರುತ್ತದೆ. ಆ ಭಯವೇ ಅವರನ್ನು ಭ್ರಷ್ಟರನ್ನಾಗಿಸುತ್ತದೆ. ಆರ್ಥಿಕವಾಗಿ ದುರ್ಬಲವಾಗಿರುವ ವರ್ಗವನ್ನು ಅವರ ಕನಿಷ್ಠ ಅಗತ್ಯಗಳಿಂದಲೂ ವಂಚಿಸಿ, ಅವರನ್ನು ಹತ್ತಿಕ್ಕಿ, ಆ ಶೋಷಣೆಯನ್ನು ಪ್ರತಿಭಟಿಸುವ ಅತಿ ಕ್ಷೀಣಧ್ವನಿಯನ್ನೂ ಅಡಗಿಸುವ ಪ್ರಯತ್ನವೇ, ಈ ಭ್ರಷ್ಟತೆಯ ಕ್ರೌರ್ಯರೂಪವಾಗಿ ಹೊರಹೊಮ್ಮುತ್ತದೆ. ಶೋಷಿತರನ್ನು ಎಷ್ಟರ ಮಟ್ಟಿಗೆ ಬಗ್ಗಿಸಲಾಗುತ್ತದೆ ಎಂದರೆ ಅಂಥವರಿಗೆ ಯಾವುದೇ ಭರವಸೆಯಾಗಲಿ, ಯಾವುದೇ ಭವಿಷ್ಯವಾಗಲಿ ಸದಾಕಾಲಕ್ಕೆ ಮುಚ್ಚಿಹೋದಂತೆ ಇರುತ್ತದೆ. ಅಂಥವರು ನಿರಾಸೆಯಿಂದ ಕಡುದುಃಖದ ಮಡುವಿನಲ್ಲೇ ನರಳುತ್ತ, ಬದುಕನ್ನು ಹೇಗೋ ನೂಕಲು ಬಯಸುತ್ತಾರೆಯೇ ವಿನಾ, ಏನಾದರೂ ಒಂದು ಮಹತ್ವದ ಪ್ರಯತ್ನ ಮಾಡಿ ಅದರಿಂದ ಮುಕ್ತರಾಗುವ ಆಲೋಚನೆಗೇ ಎಳ್ಳುನೀರು ಬಿಟ್ಟಿರುತ್ತಾರೆ.

### ಜೀತಪದ್ಧತಿಯಂತಹ ಸಾಮಾಜಿಕ ಅನಿಷ್ಟಗಳು

ಜೀತಪದ್ಧತಿಯಂತಹ ಅನಿಷ್ಟಗಳು ಸಮಾಜದಲ್ಲಿ ಇನ್ನೂ ಜೀವಂತವಾಗಿವೆ ಎಂಬ ಆಘಾತಕಾರಿ ಸಂಗತಿ ಕೆಲವು ತಿಂಗಳುಗಳ ಹಿಂದೆ ವೃತ್ತಪತ್ರಿಕೆಗಳಲ್ಲಿ ವರದಿಯಾಗಿದೆ. ಇಂತಹ ಸಾಮಾಜಿಕ ಕಳಂಕಗಳನ್ನು ತೊಡೆದುಹಾಕಲು ಎಷ್ಟೆಲ್ಲ ಪ್ರಯತ್ನಗಳು ನಡೆಯುತ್ತಿರುವುದರ ನಡುವೆಯೇ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಕಲ್ಲುಕ್ವಾರಿಯೊಂದರಲ್ಲಿ, ಒಂದೇ ಕುಟುಂಬಕ್ಕೆ ಸೇರಿದ ೩೯ ಮಂದಿ ಬಡ ಕೂಲಿ ಕಾರ್ಮಿಕರು ಕಳೆದ ಐದಾರು ವರ್ಷಗಳಿಂದ ಜೀತದಾಳುಗಳಾಗಿ ಹೀನಾಯ ಬದುಕು ಸಾಗಿಸುತ್ತಿದ್ದರು ಎಂಬ ಸುದ್ದಿ ಇಡೀ ನಾಗರಿಕ ಸಮಾಜದ ಕಣ್ತೆರೆಸುವಂತಹ ಒಂದು ಪ್ರಕರಣ. ಶಿಕ್ಷಣ, ಉದ್ಯಮ, ವಿಜ್ಞಾನ, ತಂತ್ರಜ್ಞಾನ ಇತ್ಯಾದಿ ಹತ್ತು ಹಲವು ಕ್ಷೇತ್ರಗಳಲ್ಲಿ ಎಷ್ಟೆಲ್ಲ ಸಾಧನೆ ಮಾಡಿದ್ದೇವೆಂದು ನಾವು ಬೀಗುತ್ತಿರುವುದರ ನಡುವೆಯೇ, ಮಾನವೀಯವಾಗಿ, ವೈಚಾರಿಕವಾಗಿ, ವ್ಯಾವಹಾರಿಕವಾಗಿ ನಾವು ಇನ್ನೂ ಎಷ್ಟು ಹಿಂದುಳಿದಿದ್ದೇವೆ ಎನ್ನುವುದಕ್ಕೆ ಇದೊಂದೇ ಘಟನೆ ಸಾಕು! ಸ್ವಾತಂತ್ರ್ಯ ಬಂದು ಆರು ದಶಕಗಳಾಯಿತು. "ಎಲ್ಲ ವರ್ಗಗಳ ಜನರೂ ಸ್ವಾಭಿಮಾನದಿಂದ ಬದುಕಲು ಬೇಕಾದ ವ್ಯವಸ್ಥೆ ಕಲ್ಪಿಸುತ್ತೇವೆ, ಎಲ್ಲ ಸೌಲಭ್ಯಗಳನ್ನು ಒದಗಿಸುತ್ತೇವೆ" ಇತ್ಯಾದಿ ಇತ್ಯಾದಿ ಆಕರ್ಷಕ ಘೋಷಣೆಗಳನ್ನು ಅಧಿಕಾರಕ್ಕೆ ಬಂದ ಸರ್ಕಾರಗಳು ಮೇಲಿಂದ ಮೇಲೆ ಹೇಳುತ್ತಲೇ ಇವೆ. ಆದರೆ ಅದೇ ವೇಳೆ, ತಮ್ಮ ಮೂಗಿನ ನೇರಕ್ಕೇ ಒಂದು ವರ್ಗದ ಜನರು ನಾಗರಿಕ ಸಮಾಜದ ಎಲ್ಲ ಅವಕಾಶ, ಸವಲತ್ತುಗಳಿಂದ ವಂಚಿತರಾಗಿ, ಬದುಕಿನ ಸ್ವಾತಂತ್ರ್ಯವನ್ನೇ ಕಳೆದುಕೊಂಡು, ಪಶುಗಳಿಗಿಂತ ಕಡೆಯಾಗಿ ಜೀವಿಸುತ್ತಿದ್ದಾರೆಂಬುದು ಅತ್ಯಂತ ವಿಪರ್ಯಾಸದ ಸಂಗತಿ.

### ವಿದ್ಯಾವಂತವರ್ಗದ ಭಾವಶೂನ್ಯತೆ

ಇದರೊಂದಿಗೆ ಗಮನಿಸಬೇಕಾದ ಇನ್ನೂ ಒಂದು ಸಂಗತಿಯೆಂದರೆ ಒಪ್ಪೊತ್ತಿನ ಅನ್ನ ಮತ್ತು ಮೈತುಂಬ ಬಟ್ಟೆ ಕಾಣದ ಕೋಟ್ಯಂತರ ಮಂದಿ ನಮ್ಮ ನಡುವೆಯೇ ಇದ್ದಾರೆ ಎನ್ನುವುದು. ಗ್ರಾಮಾಂತರ ಮತ್ತು ನಗರ ಪ್ರದೇಶದ ಕೊಳೆಗೇರಿಗಳಲ್ಲಿ ಲಕ್ಷಾಂತರ ಮಂದಿ ಮಕ್ಕಳು ಪೌಷ್ಟಿಕಾಂಶದ ಕೊರತೆಯಿಂದ ಅಸುನೀಗುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಅಸಮರ್ಪಕ ಆರೋಗ್ಯಸೇವೆಯಿಂದ ಅದೆಷ್ಟೋ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ. **ನಾಗರಿಕ ಸಮಾಜದ ಪ್ರಜ್ಞಾವಂತರು ತಾವಾಗಿಯೇ ಸ್ವಯಂಸ್ಫೂರ್ತಿಯಿಂದ ಇದರ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವವರೆಗೂ, ಇಂದಿನ ದಿನಗಳ ನಿಷ್ಕ್ರಿಯ ಆಡಳಿತಯಂತ್ರದಿಂದ ಮಾತ್ರವೇ ಈ ದಾರುಣ ಪರಿಸ್ಥಿತಿಯು ಸುಧಾರಿಸುವುದನ್ನು ನಾವು ಎಳ್ಳಷ್ಟೂ ನಿರೀಕ್ಷಿಸಲಾಗದು.** ಕೋಟ್ಯನುಕೋಟಿ ದೇಶಬಾಂಧವರು ಪಶುಗಳಿಗಿಂತಲೂ ಕಡೆಯಾಗಿ ಬದುಕು ಸಾಗಿಸುತ್ತಿದ್ದರೂ, ಅವರು ಬೆವರು ಸುರಿಸಿ ದುಡಿದ ಹಣದಿಂದಲೇ ವಿದ್ಯಾಭ್ಯಾಸ ಪಡೆದು, ಕಣ್ಣಿದ್ದೂ ಕುರುಡರಂತಿರುವ ವಿದ್ಯಾವಂತ ವರ್ಗದ ಭಾವಶೂನ್ಯತೆಯನ್ನು ಕಂಡು, ಒಂದು ಶತಮಾನದ ಹಿಂದೆಯೇ ಸ್ವಾಮಿ ವಿವೇಕಾನಂದರು ನುಡಿದ ಮಾತುಗಳು ಇಂದು ಹೆಚ್ಚು ಪ್ರಸ್ತುತವಾಗಿವೆ:

> **"ಎಲ್ಲಿಯವರೆಗೂ ಉಪವಾಸದಲ್ಲಿ, ಅಜ್ಞಾನದಲ್ಲಿ ಕೋಟ್ಯನುಕೋಟಿ ದೀನರು ನರಳುತ್ತಿರುವರೋ, ಅಲ್ಲಿಯವರೆಗೂ ಅದೇ ದೀನ ಬಡಜನರ ದುಡಿತದಿಂದ ವಿದ್ಯಾಭ್ಯಾಸ ಪಡೆದು, ಅವರನ್ನು ನಿರ್ಲಕ್ಷಿಸಿರುವ ಪ್ರತಿಯೊಬ್ಬನನ್ನೂ ದೇಶದ್ರೋಹಿಯೆಂದೇ ನಾನು ಎಣಿಸುತ್ತೇನೆ.**
>
> **ಬಡವರನ್ನು ಹಿಂಡಿ ತಮ್ಮ ಸಂಪತ್ತೆಲ್ಲವನ್ನೂ ಪಡೆದು, ತಾವು ಮಹಾ ನಾಜೂಕಿನವರೆಂದು ಭಾವಿಸಿ, ಪಶುಗಳಿಗಿಂತಲೂ ಕಡೆಯಾಗಿ ಬದುಕುತ್ತಿರುವ ಕೋಟಿ ಕೋಟಿ ದೀನರಿಗೋಸ್ಕರ ಏನನ್ನೂ ಮಾಡದಿರುವ ದ್ರೋಹಕ್ಕಿಂತ ಮಿಗಿಲಾದ ದೇಶದ್ರೋಹ ಇನ್ನು ಯಾವುದಿದೆ?"**

ಋಣಸಂದಾಯದ ಪ್ರಜ್ಞೆಯೇ ಇಲ್ಲದ ಕೃತಘ್ನತೆಯನ್ನು ಧಿಕ್ಕರಿಸಿ ನುಡಿದಿರುವ ಈ ಮಾತುಗಳು ನಮ್ಮ ದೇಶದ ಸಮಸ್ತ ವಿದ್ಯಾವಂತ ಸಮುದಾಯದ ನೈತಿಕಪ್ರಜ್ಞೆಯನ್ನೂ, ಅಂತಃಸಾಕ್ಷಿಯನ್ನೂ ಹರಿತವಾಗಿ ಕೆಣಕುವಂತಿವೆ.